ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಒಂದು ಸಾಅ್ ನಿಂದ ಐದು ಮುದ್ದ್ ವರೆಗಿನ ನೀರಿನಲ್ಲಿ ಸ್ನಾನ ಮಾಡುತ್ತಿದ್ದರು ಮತ್ತು ಒಂದು ಮುದ್ದ್ ನೀರಿನಲ್ಲಿ ವುದೂ ನಿರ್ವಹಿಸುತ್ತಿದ್ದರು

ಅನಸ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ: ಅವರು ಹೇಳಿದರು: "ಪ್ರವಾದಿಯವರು
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಒಂದು ಸಾಅ್ ನಿಂದ ಐದು ಮುದ್ದ್ ವರೆಗಿನ ನೀರಿನಲ್ಲಿ ಸ್ನಾನ ಮಾಡುತ್ತಿದ್ದರು ಮತ್ತು ಒಂದು ಮುದ್ದ್ ನೀರಿನಲ್ಲಿ ವುದೂ ನಿರ್ವಹಿಸುತ್ತಿದ್ದರು."
[صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ದೊಡ್ಡ ಅಶುದ್ಧಿಗಾಗಿ (ಜನಾಬತ್) ಒಂದು ಸಾಅ್ ನಿಂದ ಐದು ಮುದ್ದ್ ವರೆಗಿನ ನೀರಿನಲ್ಲಿ ಸ್ನಾನ ಮಾಡುತ್ತಿದ್ದರು ಮತ್ತು ಒಂದು ಮುದ್ದ್ ನೀರಿನಲ್ಲಿ ವುದೂ ನಿರ್ವಹಿಸುತ್ತಿದ್ದರು. ಒಂದು ಸಾಅ್ ಎಂದರೆ ನಾಲ್ಕು ಮುದ್ದ್ ಗಳು. ಒಂದು ಮುದ್ದ್ ಎಂದರೆ ಒಬ್ಬ ಸಾಮಾನ್ಯ ಗಾತ್ರದ ವ್ಯಕ್ತಿಯ ಎರಡು ಅಂಗೈಗಳನ್ನು ಸೇರಿಸಿದರೆ ತುಂಬುವಷ್ಟು ಪ್ರಮಾಣ.

http://www.sunnah.global/hadeeth/kn/show/8387